**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 211/ 2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ಕೆ ಆರ್ ಪ್ರಸಾದ್ | | **ಚಾ.ಸಾ.-21** |
| **ತಂದೆ ಹೆಸರು** | - ರಂಗಪ್ಪ | | **ಫ್ರಾ.ಸಾ.-7** |
| **ವಯಸ್ಸು** | - 47 ವರ್ಷ | | |
| **ಉದ್ಯೋಗ** | - ಪೊಲೀಸ್ ಇನ್ಸ್‌ಪೆಕ್ಟರ್ , | | |
| **ವಾಸ ಸ್ಥಳ** | - ಮೈಸೂರು | | |

ದಿನಾಂಕಃ 06.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು ದಿನಾಂಕಃ 10.05.2015 ರಿಂದ 02.03.2017 ರವರೆಗೆ ಮದ್ದೂರು ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 01.06.2016 ರಂದು, ಈ ಪ್ರಕರಣದ ಕಡತವನ್ನು ಚಾ.ಸಾ. 20 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿರುತ್ತೇನೆ. ಅದೇ ದಿನ ಅಪಘಾತವನ್ನುಂಟು ಮಾಡಿದ್ದ ಕಾರನ್ನು ಪತ್ತೆ ಮಾಡಿ, ಹಾಜರುಪಡಿಸುವಂತೆ ಚಾ.ಸಾ. 19 ರವರನ್ನು ನೇಮಿಸಿರುತೆತೇನೆ. ದಿನಾಂಕಃ 03.06.2016 ರಂದು, ಪತ್ತೆಗೆ ಹೋಗಿದ್ದ ಚಾ.ಸಾ. 19 ರವರು ಅಪಘಾತವನ್ನುಂಟುಮಾಡಿದ ಕೆಎ-11 ಎಂ-5938 ಟಾಟಾ ಇಂಡಿಕಾ ಕಾರನ್ನು ಮತ್ತು ಹರ್ಕ್ಯೂಲಸ್ ಸೈಕಲ್ ನ್ನು ಹಾಜರುಮಾಡಿದ್ದು ಅವುಗಳನ್ನು ಪಂಚರಾದ ಕಾರ್ತಿಕ್ ಮತ್ತು ಕುಮಾರ್ ರವರ ಸಮಕ್ಷಮದಲ್ಲಿ ಬೆಳಗ್ಗೆ 10.00 ರಿಂದ 10.40 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಟಾಟಾ ಇಂಡಿಕಾ ಕಾರನ್ನು ತಪಾಸಣೆ ಮಾಡಿ, ವರದಿ ನೀಡುವಂತೆ ಆರ್ ಟಿ ಓ ರವರಿಗೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ, ಚಾ.ಸಾ. 3 ಮತ್ತು 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಅಪಘಾತವನ್ನುಂಟು ಮಾಡಿದ್ದ ಕಾರಿನ ಆರ್ ಸಿ ಮಾಲೀಕರಾದ ಚಾ.ಸಾ. 14 ರವರು ಠಾಣೆಗೆ ಹಾಜರಾದ ಮೇರೆಗೆ ಅವರಿಗೆ ಕಲಂ 133 ರಡಿಯಲ್ಲಿ ನೋಟೀಸ್ ನ್ನು ನೀಡಿ ಉತ್ತರವನ್ನು ಪಡೆದಿರುತ್ತೇನೆ. ನಂತರ ಸದರೀ

ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದುಕೊಂಡು ಇಂಡಿಮ್ನಿಟಿ ಬಾಂಡ್ ಮೂಲಕ ಕಾರನ್ನು ಬಿಡುಗಡಗೊಳಿಸಿರುತ್ತೇನೆ. ಆ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆಸಿರುತ್ತೇನೆ. ಆರೋಪಿಯನ್ನು ದಸ್ತಗಿರಿ ಮಾಡಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯನ್ನು ಗುರುತಿಸಿದ ಬಗ್ಗೆ ಚಾ.ಸಾ. 1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿನಾಂಕಃ 15.06.2016 ರಂದು, ಪಿ ಎಂ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 20.07.2016 ರಂದು, ಐ ಎಂ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸಾಕ್ಷಿ ಚಾ.ಸಾ.2 ರವರ ಹೇಳಿಕೆಯನ್ನು ಪಡೆದುಕೊಂಡಿರುತೇನೆ. ದಿನಾಂಕಃ 22.07.2016 ರಂದು ಚಾ.ಸಾ.2 ರವರ ಗಾಯದ ಪ್ರಮಾಣಪತ್ರವನ್ನು ಮತ್ತು ಎಂ ಎಲ್ ಸಿ ಎಕ್ಸ್ ಟ್ರ್ಯಾಕ್ಟ್ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 06.12.2016 ರಂದು ಚಾ,ಸಾ. 2 ರವರಿಗೆ ಇಂಡಿಮ್ನಿಟಿ ಬಾಂಡ್ ಮೂಲಕ ಸೈಕಲ್ ನ್ನು ಬಿಡುಗಡೆ ಗೊಳಿಸಿರುತ್ತೇನೆ. ನಂತರ ಪ್ರಕರಣದ ತನಿಖೆಯನ್ನು ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಪಿ ಎಂ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 10 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 10(ಎ) ಎಂದು ಗುರುತಿಸಲಾಯಿತು, ಐ ಎಂ ವಿ ವರದಿಯನ್ನು ಈಗಾಗಲೇ ನಿಪಿ. 11 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 11(ಎ) ಎಂದು ಗುರುತಿಸಲಾಯಿತು. ಚಾ.ಸಾ. 2 ರವರ ಗಾಯದ ಪ್ರಮಾಣಪತ್ರವನ್ನು ಈಗಾಗಲೀ ನಿ.ಪಿ. 12 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 12(ಎ) ಎಂದು ಗುರುತಿಸಲಾಯಿತು. 133 ನೋಟೀಸನ್ನು ಈಗಾಗಲೇ ನಿ.ಪಿ. 13 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 13(ಬಿ) ಎಂದು, ಪ್ರತಿಯುತ್ತರವನ್ನು ಈಗಾಗಲೇ ನಿ.ಪಿ. 14 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 14(ಬಿ) ಎಂದು, ಇಂಡಿಮ್ನಿಟಿ ಬಾಂಡ್ ನ್ನು ಈಗಾಗಲೇ ನಿ.ಪಿ. 15 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 15(ಬಿ) ಎಂದು ಗುರುತಿಸಲಾಯಿತು. ನಿ.ಪಿ. 17 ಅಮಾನತ್ತು ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 17(ಬಿ) ಎಂದು, ಚಾ.ಸಾ. 2 ರವರ ಎಂ ಎಲ್ ಸಿ ಎಕ್ಸ್ ಟ್ರ್ಯಾಕ್ಟ್ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು,

ಅದನ್ನು ನಿ.ಪಿ. 18 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 18(ಎ) ಎಂದು, ಇಂಡಿಮ್ನಿಟಿ ಬಾಂಡ್ ನ್ನು ನಿ.ಪಿ. 19 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ. 19(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ ಹೆಚ್ ಸಿ ವಿ ರವರಿಂದ**

ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ, ನಿಮ್ಮ ಅಧಿಕಾರಿಗಳು ದಾಖಲು ಮಾಡಿರುವ ಸುಳ್ಳು ಪ್ರ.ವ. ವರದಿಗೆ ಪೂರಕವಾಗುವಂತೆ ಆರೋಪಿಯ ಕಾರನ್ನು ವಶಪಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅಮಾನತ್ತು ಮಹಜರ್ ನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಐ ಎಂ ವಿ ವರದಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. 133 ನೋಟೀಸ್ ನ್ನು ಈ ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಚಾ.ಸಾ. 1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಐ ಎಂ ವಿ ವರದಿ ಮತ್ತು ಪಿ ಎಂ ವರದಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದಿಃರಿ ಎಂದರೆ ಸರಿಯಲ್ಲ. ಚಾ.ಸಾ. 2 ರವರ ಹೇಳಿಕೆಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಚಾ.ಸಾ. 2 ರವರ ಗಾಯದ ಪ್ರಮಾಣಪತ್ರವನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಿಬ್ಬಂದಿಯವರು ದಾಖಲು ಮಾಡಿರುವ ಸುಳ್ಳು ಪ್ರ.ವ. ವರದಿಗೆ, ಪೂರಕವಾಗುವಂತೆ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಚಾ.ಸಾ. 1 ರವರಿಗೆ ಪರಿಹಾರದ ಹಣವನ್ನು ಕೊಡಿಸುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.